ಬಹೂಪಯೋಗಿ ಅಮೃತಬಳ್ಳಿ

ಲವಲವಿಕ GARDEN ಲೋಕ

ಅಮೃತಬಳ್ಳಿಯು ನಮ್ಮ ದೇಶದ ಒಂದು ಪ್ರಮುಖ ಔಷಧೀಯ ಸಸ್ಯ. ಇದನ್ನು ಚರ್ಮದ ತೊಂದರೆಗಳು, ಜ್ವರ, ರಕ್ತಹೀನತೆ, ಕಾಮಾಲೆ ಹಾಗೂ ಮಧುಮೇಹ ನಿವಾರಿಸಲು ಬಳಸುತ್ತಾರೆ. ಅಲ್ಲದೆ ಇದರ ರಸವನ್ನು ಮಜ್ಜಿಗೆಯೊಂದಿಗೆ ಸೇವಿಸು ವುದರಿಂದ ಮೂಲವ್ಯಾಧಿಯನ್ನು ಮತ್ತು ಮಲಬದ್ಧತೆಯನ್ನು ನಿವಾರಿಸಬಹುದು. ಇದನ್ನು ಎಲ್ಲಾ ರೀತಿಯ ಮಣ್ಣಿನಲ್ಲಿ ಬೆಳೆಯಬಹುದಾದರೂ ಚೆನ್ನಾಗಿ ನೀರು ಬಸಿದು ಹೋಗುವ ಸಾವಯವ ಅಂಶವುಳ್ಳ ಮರಳು ಮಿಶ್ರಿತ ಗೋಡು ಮಣ್ಣಿನಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಈ ಬಳ್ಳಿಯು ಎಲ್ಲಾ ರೀತಿಯ ಹವಾಮಾನಕ್ಕೂ ಹೊಂದಿಕೊಳ್ಳುತ್ತದೆ. ಇದರ ಕಾಂಡಗಳನ್ನು ಬಳಸಿ ಸಸ್ಯಾಭಿವೃದ್ಧಿ ಮಾಡಬಹುದು. ಇದನ್ನು ಕೈತೋಟಗಳಲ್ಲಿ ಮತ್ತು ಕುಂಡಗಳಲ್ಲಿ ಸುಲಭವಾಗಿ ಬೆಳೆಯಬಹುದು. ಕುಂಡಗಳಿಗೆ



ಕುಂಡ ಮಿಶ್ರಣವನ್ನು ತುಂಬಿ 15-20 ಸೆಂ. ಮೀ. ಉದ್ದದ ಕಾಂಡಗಳನ್ನು ಆರಿಸಿ ನಾಟಿ ಮಾಡಬೇಕು. ನಾಟಿ ಮಾಡಿದ ನಂತರ ಆಗಾಗ ನೀರು ಮತ್ತು ಗೊಬ್ಬರ ಒದಗಿಸಬೇಕು. ಹೆಸರೇ ಸೂಚಿಸುವಂತೆ ಇದು ಬಳ್ಳಿಯಾದ್ದರಿಂದ ಇದಕ್ಕೆ ಕೋಲು ಅಥವಾ ಕಬ್ಬಿಣದ ಕಂಬಗಳನ್ನು ಆಸರೆಯಾಗಿ ನೀಡಿ ಬಳ್ಳಿಯನ್ನು ಹಬ್ಬಿಸುವುದರಿಂದ ಉತ್ತಮ ಇಳುವರಿಯನ್ನು ಪಡೆಯಬಹುದು. ನಾಟಿ ಮಾಡಿದ 3-4 ತಿಂಗಳ ನಂತರ ಮೊದಲ ಎಲೆಗಳನ್ನು ಕೊಯ್ಲು ಮಾಡಿ ಬಳಸಬಹುದು. ಕೊಯ್ಲುಮಾಡುವಾಗ ಯಾವುದೇ ಕಾರಣಕ್ಕೂ ಕಾಂಡಕ್ಕೆ ಹಾನಿಯಾಗದಂತೆ ಎಚ್ಚರವಹಿಸಬೇಕು. ■

ಡಾ. ಎಂ. ಶಾಲಿನಿ, ಸಹಾಯಕ ಪ್ರಾಧ್ಯಾಪಕರು (ತೋಟಗಾರಿಕೆ)
ಕೃಷಿ ವಿವಿ, ಬೆಂಗಳೂರು

V-karnataka pg 13

Hosadiganta pg 05

ಕೃಷಿ ಇಲಾಖೆ: ವಿವಿಧ ಹುದ್ದೆಗೆ ಸೆಪ್ಟೆಂಬರ್ ತಿಂಗಳಲ್ಲಿ ಪರೀಕ್ಷೆ

ವಿಧಾನಸಭೆ: ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಅಧಿಕಾರಿಗಳು ಹಾಗೂ ವಿವಿಧ ಹಂತದ ಆಯಕಟ್ಟಿನ ಸಿಬ್ಬಂದಿ ನೇಮಕ ಪ್ರಕ್ರಿಯೆಗೆ ಕರ್ನಾಟಕ ಲೋಕಸೇವಾ ಆಯೋಗ ಚಾಲನೆ ನೀಡಿದ್ದು, ಸೆಪ್ಟೆಂಬರ್ ತಿಂಗಳಲ್ಲಿ ಪರೀಕ್ಷೆ ನಡೆಸಲಿದೆ. ಮೂರು ತಿಂಗಳಲ್ಲಿ ಒಂದು ಸಾವಿರ ಹೊಸ ಹುದ್ದೆಗಳು



ಇಲಾಖೆಯಲ್ಲಿ ಭರ್ತಿಯಾಗಲಿವೆ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ಬುಧವಾರ ವಿಧಾನಸಭೆಯಲ್ಲಿ ಪ್ರಕಟಿಸಿದರು.ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಹುದ್ದೆಗಳ ಭರ್ತಿಯೇ ನಡೆದಿಲ್ಲ. ಹೀಗಾಗಿ ಪ್ರಸ್ತುತ ಶೇ. 60ರಷ್ಟು ಹುದ್ದೆಗಳು ಖಾಲಿ ಇವೆ. ಇವುಗಳ ಭರ್ತಿ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಿ, ಆಯೋಗದ ಮೂಲಕ ಇವನ್ನು ತುಂಬುವ ನಿರ್ಧಾರ ಮಾಡಿದೆ ಎಂದರು.ಇಲಾಖೆಯಲ್ಲಿ ಕಳೆದ 10 ವರ್ಷಗಳಿಂದ ಬಡ್ತಿಯನ್ನೂ ಕೊಟ್ಟಿರಲಿಲ್ಲ. ಒಂದು ತಿಂಗಳ ಹಿಂದೆ ಇದನ್ನೂ ಪೂರ್ಣಗೊಳಿಸಿ 600 ಸಿಬ್ಬಂದಿಗೆ ಬಡ್ತಿಯನ್ನೂ ನೀಡಲಾಗಿದೆ ಎಂದು ಚೆಲುವರಾಯಸ್ವಾಮಿ ವಿವರಿಸಿದರು.

S-karnataka pg 05

ಕೃಷಿಗೆ ತಾಂತ್ರಿಕ ಆವಿಷ್ಕಾರ ಅಳವಡಿಕೆ

ವಿಧಾನಸಭೆ: ರಾಜ್ಯದ ಕೃಷಿ ಕ್ಷೇತ್ರದಲ್ಲಿ ರೈತರು ನೂತನ ತಾಂತ್ರಿಕ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳಲು ಕೃಷಿ ಇಲಾಖೆಯಿಂದ ನಾನಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕೃಷಿ ವಿಶ್ವವಿದ್ಯಾಲಯಗಳು ಕೂಡ ಹೊಸ ಆವಿಷ್ಕಾರಗಳನ್ನು ರೈತರಿಗೆ ಒದಗಿಸುತ್ತಿವೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.

ಪ್ರಶ್ನೋತ್ತರ ಕಲಾಪದಲ್ಲಿ ಬಿಜೆಪಿ ಶಾಸಕ ಉಮಾನಾಥ ಕೋಟ್ಯಾನ್ ಅವರು ಪ್ರಶ್ನೆಗೆ ಅವರು ಉತ್ತರಿಸಿದರು. ಕೃಷಿ ನವೋದ್ಯಮ ಕಾರ್ಯಕ್ರಮ, ಕೇಂದ್ರ ಪುರಸ್ಕೃತ-ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಟಿಕ ಅಭಿಯಾನ ಯೋಜನೆ, ನ್ಯಾನೋ ರಸಗೊಬ್ಬರ ಬಳಕೆ, ರೈತರಿಗೆ ನೂತನ ತಾಂತ್ರಿಕತೆಗಳ ಬಗ್ಗೆ ಅರಿವು ಮೂಡಿಸುವುದು, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ, ರೈತ ಸಮೃದ್ಧಿ ಯೋಜನೆ, ಅಂತಾರಾಷ್ಟ್ರೀಯ ಸಾವಯವ ಮತ್ತು ಸಿರಿಧಾನ್ಯ ಮೇಳ, ಕೃಷಿ ಮೇಳ ಇತ್ಯಾದಿ ಕಾರ್ಯಕ್ರಮಗಳಿವೆ. ರೈತರಿಗೆ ಆಗಾಗ ತರಬೇತಿ, ಪ್ರಾತ್ಯಕ್ಷಿಕೆಯ ಮೂಲಕವೂ ತಾಂತ್ರಿಕತೆ ಬಳಕೆಗೆ ಪ್ರೋತ್ಸಾಹ ನೀಡಲಾಗುತ್ತಿದೆ

ಬಿಜೆಪಿ ಶಾಸಕ ಉಮಾನಾಥ ಕೋಟ್ಯಾನ್ ಪ್ರಶ್ನೆಗೆ ಕೃಷಿ ಸಚಿವರ ಉತ್ತರ

ಎಂದರು. ಇದಕ್ಕೆ ಆಕ್ಷೇಪಿಸಿದ ಶಾಸಕ ಉಮಾನಾಥ ಕೋಟ್ಯಾನ್, ಕೃಷಿ ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳಿವೆ. ಆದರೆ, ಇವುಗಳ ಬಗ್ಗೆ ಜನರಿಗೆ ತಿಳಿಯುತ್ತಿಲ್ಲ. ಇಲಾಖೆಯಲ್ಲಿ ಅಧಿಕಾರಿ, ಸಿಬ್ಬಂದಿ ಕೊರತೆ ಇರುವುದರಿಂದ ಕಾಗದದಲ್ಲಿರುವ ಈ ಮಾಹಿತಿಯನ್ನು ಅನುಷ್ಠಾನಕ್ಕೆ ತರುವುದು ಸಮಸ್ಯೆಯಾಗುತ್ತಿದೆ. ಮೂಡುಬಿದಿರೆ, ಮುಲ್ಕಿ, ಮಂಗಳೂರು ತಾಲೂಕುಗಳಲ್ಲಿ ಕೃಷಿ ಅಧಿಕಾರಿಗಳಿಲ್ಲದೇ ಮೂರು ವರ್ಷಗಳಾಗಿದ್ದು, ಕೃಷಿಕರಿಗೆ ಮಾಹಿತಿ ಲಭಿಸುವುದೇ ಕಷ್ಟವಾಗುತ್ತಿದೆ ಎಂದು ಹೇಳಿದರು.

ಪ್ರತಿಕ್ರಿಯಿಸಿದ ಸಚಿವರು, ರಾಜ್ಯದಲ್ಲಿ ಕೃಷಿ ಇಲಾಖೆಯಲ್ಲಿ ಶೇ. 57ರಿಂದ 60ರಷ್ಟು ಹುದ್ದೆಗಳು ಖಾಲಿ ಇವೆ. ಆದರೆ, ಒಬ್ಬರು ಇಬ್ಬರು ಅಧಿಕಾರಿಗಳಿರುವಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಮೂಡುಬಿದಿರೆ, ಮುಲ್ಕಿಯ ಸಮಸ್ಯೆಯನ್ನು ಬಗೆಹರಿಸಲಾಗುವುದು ಎಂದು ತಿಳಿಸಿದರು.

ಬೆಲೆ ಕುಸಿದಿದ್ದ ತೊಗರಿಯ ಬೆಳೆಯೂ ಖೋತಾ!

Udayavani pg 06

ಕಳೆದ ವರ್ಷ ಬೆಲೆಯಲ್ಲಿ ಭಾರೀ ಕುಸಿತ | ಈ ವರ್ಷ ಭಾರೀ ಮಳೆಗೆ ಅಪಾರ ಬೆಳೆ ನಷ್ಟ | ಸಂಕಷ್ಟದಲ್ಲಿರುವ ರೈತನಿಗೆ ಮತ್ತೊಂದು ಬರೆ

ಕಳೆದ ಬಾರಿ ಕ್ವಿಂಟಲ್‌ಗೆ 12 ಸಾವಿರ ಇದ್ದ ಬೆಲೆ ಈಗ ₹6 ಸಾವಿರ | ಸಗಟು ಮಾರುಕಟ್ಟೆಯಲ್ಲಿ ಪ್ರತಿ ಕೆಜಿಗೆ 170 ಇದ್ದದ್ದು ₹90ಕ್ಕೆ ಕುಸಿತ

■ ಹಣಮಂತರಾವ ಭೈರಾಮಡಗಿ


ಉದಯವಾಣಿ ಸಮಾಚಾರ

ಕಲಬುರಗಿ: ಕಲ್ಯಾಣ ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆ ತೊಗರಿ ಬೆಳೆಗಾರರಿಗೆ ಈ ಬಾರಿ ಡಬಲ್ ಹೊಡೆತ ಬಿದ್ದಿದೆ. ಕಳೆದ ವರ್ಷಕ್ಕಿಂತ ಬೆಲೆ ಅರ್ಧಕ್ಕರ್ಧ ಕುಸಿದಿದ್ದು, ಒಂದೆಡೆಯಾದರೆ, ಮುಂಗಾರು ಮಳೆಗೆ ಸುಮಾರು 3 ಲಕ್ಷ ಹೆಕ್ಟೇರ್ ಬೆಳೆ ಹಾನಿಯಾಗಿದೆ. ಇತ್ತ ಬೆಲೆಯೂ ಇಲ್ಲದೆ, ಅತ್ತ ಬೆಳೆಯೂ ಇಲ್ಲದೆ ಅನ್ನದಾತ ಆಕ್ರಂದಿಸಿ ಕಂಗಾಲಾಗಿದ್ದಾನೆ.

ಕಳೆದ ವರ್ಷ ಪ್ರತಿ ಕ್ವಿಂಟಲ್‌ಗೆ 11ರಿಂದ 12 ಸಾವಿರ ರೂ. ವರೆಗೆ ಇತ್ತು. ಆದರೆ, ಪ್ರಸ್ತುತ ಮಾರುಕಟ್ಟೆಯಲ್ಲಿ ಪ್ರತಿ ಕ್ವಿಂಟಲ್‌ಗೆ 6,000ರಿಂದ 6,200ರೂ.ಗೆ ಕುಸಿದಿದೆ. ಬೆಲೆ ಇಲ್ಲದೇ ಸಂಗ್ರಹಿಸಿಟ್ಟಿದ್ದ ರೈತರು ಈಗ ದಿಕ್ಕು ತೋಚದಂತಾಗಿದ್ದಾರೆ. ಹತ್ತು ವರ್ಷಗಳ ಹಿಂದೆ ತೊಗರಿ 6 ಸಾವಿರ ರೂ. ಕ್ವಿಂಟಲ್ ದರ ಇತ್ತು. ಈಗ ತೊಗರಿ ಬೆಲೆ 10 ವರ್ಷಗಳಷ್ಟು ಹಿಂದಕ್ಕೆ ಹೋದಂತಾಗಿದೆ!

ತೊಗರಿ ಬೆಲೆ ಕುಸಿತದ ಬೆನ್ನಲ್ಲೇ ಸಗಟು ಮಾರುಕಟ್ಟೆಯಲ್ಲಿ ತೊಗರಿ ಬೇಳೆ ದರ ಕೆ.ಜಿ.ಗೆ 90ರಿಂದ 100 ರೂ.ಗೆ ಕುಸಿದಿದೆ. ಕಳೆದ ವರ್ಷ 150ರಿಂದ 170 ರೂ.ವರೆಗೆ ಇತ್ತು. ಹೀಗಾಗಿ ರೈತ ಮಂಙ್ಯುತಿನ್ನುವಂತಾಗಿದೆ.

ಮತ್ತೊಂದೆಡೆ ಈ ಬಾರಿ ಮುಂಗಾರು ಮಳೆ ಭಾರೀ



ಸತತ ಮಳೆಯಿಂದ ತೊಗರಿ ಬೆಳೆಯಲ್ಲಿ ನೀರು ನಿಂತಿರುವುದು.

> ಸತತ ಮಳೆಯಿಂದ ಹಾನಿಯಾಗಿರುವ ಬೆಳೆ ಹಾನಿ ಸಮೀಕ್ಷೆ ಮಾಡಲು ಅಧಿಕಾರಿಗಳು ಜಮೀನುಗಳಿಗೆ ಈಗ ಹೋಗದಂತಹ ವಾತಾವರಣವಿದೆ. ಈ ಕುರಿತು ಸರ್ಕಾರಕ್ಕೆ ಮಾಹಿತಿ ಕಳುಹಿಸಲಾಗಿದೆ. ಮಳೆ ನಿಂತ ನಂತರ ಪ್ರಾಥಮಿಕವಾಗಿ ಹಾನಿ ಸಮೀಕ್ಷೆ ಮಾಡಲಾಗುವುದು.
> ● ಬಿ. ಫೌಜಿಯಾ ತರನ್ನುಮ್, ಡಿಸಿ, ಕಲಬುರಗಿ

> ತೊಗರಿ ರೈತನ ಹಣೆಬರಹ ಇಷ್ಟೇ. ತೊಗರಿ ಬೆಳೆದಾಗ ಬೆಲೆ ಇರಲ್ಲ. ಬೆಲೆ ಇದ್ದಾಗ ಬೆಳೆ ಇರಲ್ಲ. ಈ ವರ್ಷವಂತೂ ಬೆಳೆಯೂ ಇಲ್ಲ, ಬೆಲೆಯೂ ಇಲ್ಲ ಎನ್ನುವಂತಾಗಿದೆ. ತೊಗರಿ ಎಂಎಸ್‌ಪಿ ಎಲ್ಲರ ತಪ್ಪಿನಿಂದ ಉಪಯೋಗಕ್ಕೆ ಬಾರದಂತಾಯಿತು. ಈಗಲೂ ನೆರವಿಗೆ ಬರಬಹುದಾಗಿದೆ. ಈಗಲಾದರೂ ವಿಧಾನಸಭೆ ಅಧಿವೇಶನದಲ್ಲಿ ನಮ್ಮ ಶಾಸಕರು ತೊಗರಿ ರೈತನ ಸಮಸ್ಯೆ ಕುರಿತಾಗಿ ಧ್ವನಿ ಎತ್ತಲಿ.
> ● ಜೆ.ಡಿ.ಪಾಟೀಲ, ರೈತ

ನೆರವಿಗೆ ಬಾರದ ಎಂಎಸ್‌ಪಿ: ತೊಗರಿಗೆ ಕೇಂದ್ರದ ಬೆಂಬಲ ಬೆಲೆ ಕ್ವಿಂಟಲ್‌ಗೆ 8 ಸಾವಿರ ರೂ. ಇದೆ. ಕಳೆದ ವರ್ಷ 7,550 ರೂ. ಇತ್ತು. ಡಿಸೆಂಬರ್ ಕೊನೇ ವಾರ ಇಲ್ಲವೇ ಜನವರಿ ಆರಂಭದಲ್ಲಿ ಹೊಸ ತೊಗರಿ ಮಾರು ಕಟ್ಟೆಗೆ ಬರುತ್ತದೆ. ಆದರೆ, ರಾಜ್ಯ ಸರ್ಕಾರ ಬೆಂಬಲ ಬೆಲೆಯಲ್ಲಿ ತೊಗರಿ ಖರೀದಿಸುವ ಕೇಂದ್ರಗಳನ್ನು ಆರಂಭಿಸಲು ಸ್ವಲ್ಪ ವಿಳಂಬ ಧೋರಣೆ ತಳೆಯಿತು. ಜನವರಿ ಕೊನೆಯಲ್ಲಿ ತೊಗರಿ ಖರೀದಿ ಕೇಂದ್ರ ಹಾಗೂ ನೋಂದಣಿ ಪ್ರಕ್ರಿಯೆ ಆರಂಭಿಸಲಾಯಿತು. ಮೊದಲು ಒಂದು ವಾರ ಆನ್‌ಲೈನ್ ಸಮಸ್ಯೆಯಿಂದ ನೋಂದಣಿಯೇ ಆಗಲಿಲ್ಲ. ಆಳುದ ರಾಜ್ಯ ಸರ್ಕಾರ ಪ್ರೋತ್ಸಾಹಧನ ನಿಗದಿ ಮಿನಿಮೇಷ ಎಣಿಸಿತು. ಕೊನೆಗೆ ಫೆಬ್ರವರಿ 8ರಂದು 450 ರೂ. ಪ್ರೋತ್ಸಾಹಧನ ನಿಗದಿ ಮಾಡಲಾಯಿತು. ಕೊನೆಗೆ 8000 ರೂ. ದರ ಆಂತಿಮಗೊಂಡಿತು. ಆಗ ಮಾರುಕಟ್ಟೆಯಲ್ಲಿ ತೊಗರಿ ಬೆಲೆ ಕ್ವಿಂಟಲ್ 7ರಿಂದ 7500 ರೂ. ಇತ್ತು. ಕೆಲ ರೈತರು ತೊಗರಿ ಖರೀದಿ ಕೇಂದ್ರಗಳತ್ತ ಹೆಜ್ಜೆ ಹಾಕಿದರು. ಬಹುತೇಕ ರೈತರು ಮಾರುಕಟ್ಟೆಗಿಂತ 500 ರೂ. ಇಳುವೆ 700 ರೂ. ಮಾತ್ರ ಎಂಎಸ್‌ಪಿ ಹೆಚ್ಚಳವಿದೆ. ಮುಂದೆ ದರ 10 ಸಾವಿರ ರೂ. ಆಗುತ್ತದೆ ಎಂದು ತೊಗರಿ ಖರೀದಿಯತ್ತ ಮುಖ ಮಾಡಲೇ ಇಲ್ಲ.

30 ಲಕ್ಷ ಕ್ವಿಂಟಲ್ ಖರೀದಿಗೆ ಅವಕಾಶ

ಎಂಎಸ್‌ಪಿಯಲ್ಲಿ ತೊಗರಿ ಖರೀದಿಸಲು ಕೇಂದ್ರ ಸರ್ಕಾರ ಕಳೆದ ವರ್ಷ ರಾಜ್ಯಕ್ಕೆ 30 ಲಕ್ಷ ಕ್ವಿಂಟಲ್ ನಿಗದಿ ಮಾಡಿತ್ತು. ಆದರೆ, ರಾಜ್ಯ ಸರ್ಕಾರ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ವಿಜಯಪುರ ಜಿಲ್ಲೆಗಳಲ್ಲಿ ಒಟ್ಟಾರೆ 461 ಖರೀದಿ ಕೇಂದ್ರಗಳನ್ನು ತೆರೆದು 1.24 ಲಕ್ಷ ರೈತರಿಂದ ಕೇವಲ 18 ಲಕ್ಷ ಕ್ವಿಂಟಲ್ ತೊಗರಿ ಮಾತ್ರ ಖರೀದಿಸಿದೆ. ಮೇ ತಿಂಗಳಲ್ಲೇ ಖರೀದಿ ಪ್ರಕ್ರಿಯೆ ಮುಕ್ತಾಯಗೊಳಿಸಲಾಗಿದೆ. ಹಿಂದಿನ ವರ್ಷಗಳಲ್ಲಿ ಕಲಬುರಗಿ ಜಿಲ್ಲೆಯೊಂದರಲ್ಲೇ ಸುಮಾರು 20 ಲಕ್ಷ ಕ್ವಿಂಟಲ್ ಎಂಎಸ್‌ಪಿಯಲ್ಲಿ ತೊಗರಿ ಖರೀದಿಸಿತ್ತು. ಸರ್ಕಾರ-ಅಧಿಕಾರಿಗಳ ಮತ್ತು ರೈತರ ನಡುವಿನ ಸಮನ್ವಯ ಕೊರತೆಯಿಂದ ಎಂಎಸ್‌ಪಿ ನಿರೀಕ್ಷಿತ ಯೋಗವಾಗಿಲ್ಲ.

ಅಜಿನಮೊಟೊ ಸೈಲೆಂಟ್ ಕಿಲ್ಲರ್

• ಡಾ. ಎಚ್.ಎಸ್. ಪ್ರೇಮಾ



ದಶಕಗಳ ಹಿಂದಿನ ಮಾತು. ಅಮ್ಮ ಅಡುಗೆ ಮಾಡುತ್ತಿದ್ದರೆ ಮನೆಯೆಲ್ಲ ಘಮಘಮಿಸುತ್ತಿತ್ತು. ಕಾಲ ಕ್ರಮೇಣ ಹಸಿರು ಕ್ರಾಂತಿ ನೆಪದಲ್ಲಿ ಅತಿ ರಾಸಾಯನಿಕಗಳ ಬಳಕೆಯಿಂದ ಆಹಾರದ ರುಚಿ ಕ್ಷೀಣಿಸಿತು. ಆಹಾರಗಳಲ್ಲಿ ಕೃತಕ ರುಚಿ ಸೇರಿಸುವುದು, ಆಹಾರದ ಔದ್ಯೋಗೀಕರಣ, ಇತರ ಬ್ರಾಂಡ್‌ಗಳ ಆಹಾರಕ್ಕಿಂತ ವಿಶಿಷ್ಟವಾಗಿರಲಿ ಎಂಬ ಕಾರಣದಿಂದ 'ರಾಸಾಯನಿಕ ರುಚಿ' ಮೊನೊಸೋಡಿಯಂ ಗ್ಲುಟಮೇಟ್ (ಎಂಎಸ್‌ಜಿ) ಸೇರಿಸುವ ಕೆಟ್ಟ ಸಂಪ್ರದಾಯ ಆರಂಭವಾಯಿತು. ಈ ವಸ್ತು 'ರಾಸಾಯನಿಕ ರುಚಿಯ ಪಿತಾಮಹ'! ಸಾಮಾನ್ಯರ ಭಾಷೆಯಲ್ಲಿ ಇದರ ಹೆಸರು ಅಜಿನಮೊಟೊ.

ಇದು ಚೀನಾದಿಂದ ಭಾರತಕ್ಕೆ ಎರವಲಾಗಿ ಬಂದ ರುಚಿ. ಸೋಡಿಯಂ ಮತ್ತು ಗ್ಲುಟಮಿಕ್ ಆಮ್ಲಗಳ ಮಿಶ್ರಣ. ಬೆಳ್ಳಗೆ ಹರಳು ಹರಳಾಗಿರುವ ಪದಾರ್ಥ. ಇದನ್ನು ಕೃತಕವಾಗಿ ತಯಾರಿಸಿ ಆಹಾರಗಳಲ್ಲಿ ಸೇರಿಸುವುದರಿಂದ ಆರೋಗ್ಯಕ್ಕೆ ಆಗುವ ಹಾನಿಗಳು ಹಲವು. ಇದಕ್ಕೆ ವಿಶಿಷ್ಟ ರುಚಿಯಿದೆ. ಇದರ ವಿಶಿಷ್ಟ ಘಮಲಿಗೆ ದಾಸರಾಗುವ ಗುಣವೂ ಇದೆ. ಈ ಕಾರಣಕ್ಕೆ ವ್ಯಾಪಾರ ಹೆಚ್ಚಿಸಿಕೊಳ್ಳಲೂ ಅಜಿನಮೊಟೊ ಬಳಸುತ್ತಾರೆ. ಗೋಬಿ ಮಂಚೂರಿಯನ್, ನೂಡಲ್ಸ್, ಕೆಲ ಮಾದರಿಯ ಸೂಪ್‌ಗಳಲ್ಲಿ ಇವುಗಳ ಬಳಕೆ ಹೆಚ್ಚು. ಚೈನೀಸ್ ಫುಡ್‌ಗಳಲ್ಲಿ ಇದರ ಬಳಕೆ ಸಾಮಾನ್ಯ.





ಜೀವಕ್ಕೆ ಕಂಟಕ

ಪ್ರಕೃತಿ ಸಹಜವಾಗಿ ಟೊಮೇಟೊ ಇನ್ನಿತರ ಉತ್ಪನ್ನಗಳಲ್ಲಿ ಇರುವ ಮೊನೊಸೋಡಿಯಂ ಗ್ಲುಟಮೇಟ್ ದೇಹ ಸೇರಿದರೆ ಆರೋಗ್ಯಕ್ಕೆ ಹಾನಿಯಿಲ್ಲ. ಆದರೆ, ಕೃತಕ ಅಜಿನಮೊಟೊ ತಲೆನೋವು, ಹೊಟ್ಟೆತೊಳೆಸುವುದು, ಕೆಲವೊಮ್ಮೆ ಹೊಟ್ಟೆನೋವು ತರಿಸುತ್ತದೆ. ಇದರ ಸೇವನೆಯಿಂದ ಅಸ್ತಮಾ ಕಾಯಿಲೆ ಸಾಧ್ಯತೆ ಇದೆ ಎಂದು ಕೆಲ ಸಂಶೋಧನೆಗಳು ಹೇಳುತ್ತವೆ. ದೀರ್ಘ ಕಾಲದ ಬಳಕೆಯಿಂದ ಸಂತಾನಹೀನತೆ ಸಮಸ್ಯೆ ಎದುರಾಗಬಹುದು. ಈ ರಾಸಾಯನಿಕ ರುಚಿ ಬೆರೆಸಿದ ಆಹಾರದಿಂದ ಮಕ್ಕಳನ್ನು ದೂರ ಇಡುವುದು ತೀರಾ ಅನಿವಾರ್ಯ. ಗರ್ಭಿಣಿಯರೂ ಇದರ ಸೇವನೆ ತ್ಯಜಿಸಿದರೆ ಹುಟ್ಟಲಿರುವ ಮಗುವಿಗೆ ರಕ್ಷಣೆ ಸಿಗುತ್ತದೆ. ಏಕೆಂದರೆ, ಹೊಟ್ಟೆಯಲ್ಲಿರುವ ಮಗುವಿಗೂ ವಾಸನೆ ಅನುಭವಕ್ಕೆ ಬರುತ್ತದೆ. ಶಿಶುವಿನ ಸೂಕ್ಷ್ಮ ದೇಹಕ್ಕೂ ಈ ಘಾಟು ವಾಸನೆ ಹಿಂಸೆಯೊಡ್ಡಬಲ್ಲದು!



ಅಪಾಯವಿದ್ದರೂ ಬಳಕೆ

FSSAI ವರದಿ ಪ್ರಕಾರ, ಒಂದು ಬ್ರಾಂಡ್‌ನ ನೂಡಲ್ಸ್‌ನಲ್ಲಿ ಇದರ ಬಳಕೆಯಿಂದ ಆ ಉತ್ಪನ್ನವನ್ನು ಮಾರುಕಟ್ಟೆಯಿಂದ ಹಿಂಪಡೆಯಲಾಗಿತ್ತು. ಈ 'ಎಂಎಸ್‌ಜಿ'ಯಿಂದ ಇಷ್ಟೆಲ್ಲ ಅಪಾಯವಿದ್ದರೂ ಇದರ ಬಳಕೆಗೆ ನಿಷೇಧವಿಲ್ಲ. ಆಹಾರಗಳಲ್ಲಿ ಇದನ್ನು ಬಳಸಿದ್ದರೆ ಪ್ಯಾಕ್ ಮೇಲೆ ಉಲ್ಲೇಖಿಸಬೇಕು. ಬಳಸಿಯೂ ಮಾಹಿತಿ ನೀಡದೇ ಇದ್ದರೆ ಕಾನೂನು ಕ್ರಮ ಕೈಗೊಳ್ಳಬಹುದು. (ಲೇಖಕರು: ಆಹಾರ ತಜ್ಞರು)

V-karnataka pg 02

KARNATAKA, MAHA AND GUJARAT FACE BRUNT OF THE FURY

Heavy Rain Affects Kharif Crops; Farmers Stare at Steep Losses

Jayashree Bhosale

Pune: Farmers are expected to suffer losses as heavy rains in central and south India caused widespread damage to key kharif crops like urad and tur in pulses, soyabean, cotton and vegetables.

However, prices of most vegetables have crashed by 30-40% in Mumbai as buyers could not step out due to heavy rainfall this month, traders said. They noted that prices of vegetables, where standing crops got damaged in flooded fields, are expected to start spiraling after a few weeks.



However, ample availability of imported pulses is expected to keep their prices under control, they added. "The arrival of vegetables to Mumbai has declined substantially due to the heavy rainfall. We had to throw away large quantities of leafy vegetables damaged by excess moisture," said Shankar Pingale, director, vegetable market at Vashi APMC (Agriculture Produce Marketing Committee). Onion prices have risen by about 15-20% since last week due to expectations of higher exports to Bangladesh. However, the impact of rains on the upcoming kharif harvest from Karnataka and Andhra Pradesh is still to be ascertained. "There is some damage to the onion crop in the Chitradurga district. However, as the rainfall has reduced, it has improved the prospects of future harvest," said S Anandan, an onion trader in Bengaluru.

Large parts of Maharashtra, coastal Karnataka and Gujarat experienced heavy to extremely heavy rainfall on Monday and Tuesday

Rainfall during August and September tends to inflate onion prices as it affects the kharif crop in south India. "However, this year, farmers are holding more onions, while exports demand is subdued. We will have to wait for 8-10 days to understand the impact on the onion crop," said Vikas Singh, vice president, Horticulture Produce Exporters' Association.

Tomato prices have surged 25-50% in various states in the past month, according to Ministry of Consumer Affairs data.

Heavy rainfall and flash floods in Himachal Pradesh had led to tomato crossing ₹70 a kg in north India.

Large parts of Maharashtra, coastal Karnataka and Gujarat experienced heavy to extremely heavy rainfall on Monday and Tuesday. In Maharashtra, 19 districts received excess rainfall, affecting standing crops of soyabean, cotton, urad, tur, fruits and vegetables.

"The urad farmers are expected to suffer some losses as the higher moisture content will not allow the farmers to hold back the crop. They will rush it to the markets and get lower rates," said B Krishna Murthy, managing director, Four P International.

Eco times Pg 07